

# ನನ್ನ ಕಣ್ಣನ್ನು ನಾನೇ ನಂಬಲಿಲ್ಲ

ಬಿ.ಎಂ. ಭಾರತಿ ಹಾದಿಗೆ

ಅವತ್ತು ಮೋಡ ಮುಸುಕಿದ ವಾತಾವರಣವಿತ್ತು. ಜನಸಂದಣಿ ಕಡಿಮೆಯಾದ ಮೇಲೆ, ಅಂದರೆ ಬೆಳಗಿನ ಒಂಬತ್ತು ಗಂಟೆ ಕಳೆದ ನಂತರ ನಾನು ಪಾರ್ಕಿನ ಕಡೆಗೆ ಹೊರಟೆ. ಪಾರ್ಕಿಗೂ ನಮ್ಮನೆಗೂ ಹತ್ತು ನಿಮಿಷದ ದಾರಿ. ಕಸ ಕಡ್ಡಿ ಕಲ್ಲು ತುಂಬಿ ಹಾಳು ಸುರಿಯುತ್ತಿದ್ದ ಜಾಗ ಅದೆಷ್ಟು ಬೇಗ ಗಿಡಗಳಿಂದ ತುಂಬಿ ನಳನಳಿಸುತ್ತಿದೆ ಎಂದರೆ, ನಮ್ಮ ಕಣ್ಣನ್ನೇ ನಂಬಲಾಗುತ್ತಿಲ್ಲ ಅಂತಾರಲ್ಲ ಹಂಗೆ. ಪಾರ್ಕಿನ ಉಸ್ತುವಾರಿ ನೋಡಿಕೊಳ್ಳುವವರು ಕಟ್ಟುನಿಟ್ಟಾಗಿ ಕಾರ್ಯ ನಿರ್ವಹಿಸುತ್ತಾರೆ. ಕಳೆದ ನವೆಂಬರ್ ತಿಂಗಳಲ್ಲಿ ಪಾರ್ಕಿನ ಸುತ್ತ ಹಳದಿ ಮತ್ತು ಕೇಸರಿ ಬಣ್ಣದ ಚೆಂಡು ಹೂವಿನ ಗಿಡ ಬೆಳೆದಿದ್ದರು. ಪಾರ್ಕ್ ಹೇಗೆ ಕಾಣುತ್ತಿತ್ತು ಎಂದರೆ ನನ್ನ ಕಣ್ಣನ್ನು ನನಗೇ ನಂಬಲಾಗುತ್ತಿರಲಿಲ್ಲ.

‘ಹೂವುಗಳು ಇರುವುದು ನೆಲದ ಅಂದ ಹೆಚ್ಚಿಸಲಿಕ್ಕೆ, ಕದ್ದು ಕುಯ್ಯುವುದಕ್ಕಲ್ಲ, ಹೂವುಗಳನ್ನು ಯಾರೂ ಮುಟ್ಟಬೇಡಿ’ ಎಂದು ನಾಮಫಲಕ ಹಾಕಿದ್ದರು. ಹೂವು ಇರುವುದು ಭೂಮಿಯ ಅಂದ ಹೆಚ್ಚಿಸಲು ಎಂಬ ಮಾತನ್ನು ಕುವೆಂಪು, ಅಬ್ದುಲ್ ಕಲಾಂ ಅವರು ಈ ಹಿಂದೆಯೇ ಹೇಳಿದ್ದಾರೆ ಎನ್ನುವುದು ನನಗೆ ಎಂದೋ ಗೊತ್ತು. ಕೆಮ್ಮಣ್ಣುಗುಂಡಿ ಉದ್ಯಾನವನದಲ್ಲಿ ‘ನೀ ಸೃಷ್ಟಿಸದ ಹೂವನ್ನು ನೀ ಹೇಗೆ ಕುಯ್ಯುವೆ’ ಎಂಬ ನುಡಿ–ಬರಹ ಕಂಡು ಬೆಚ್ಚಿಬಿದ್ದಿದ್ದೆ. ಅಂದಿನಿಂದ ಇವತ್ತಿನ ತನಕ ದೇವರ ಮನೆಗೆ ನಾಲ್ಕು ಹೂ ಕುಯ್ಯುವುದಕ್ಕೂ ಹಿಂದೆ ಮುಂದೆ ನೋಡುತ್ತಿದ್ದೇನೆ.

ನಮ್ಮ ತಾಯಿ ಮನೆಯಲ್ಲಿ ಕನಕಾಂಬರ, ಮಲ್ಲಿಗೆ ಹೂಗಳು ಅರಳಿ ಗಿಡದ ಬುಡಕ್ಕೆ ಸುರಿದುಹೋಗುವುದನ್ನು ನೋಡುವ ನಮ್ಮ ತಾಯಿ, ‘ಹೂ ಕಟ್ಟಿ ಹೂ ಮುಡಿಯದ ಸೋಮಾರಿ ಮಕ್ಕಳು ನೀವು’ ಎನ್ನುತ್ತಿದ್ದರು. ಇಷ್ಟೆಲ್ಲಾ ವಿಷಯ ಇರುವಾಗ ನಾನು ಪಾರ್ಕಿನ ಹೂವು ಮುಟ್ಟುವುದುಂಟೆ?

ಅದೂ ಇದು ನೆನಪು ಮಾಡಿಕೊಳ್ಳುತ್ತಾ ನಡೆದು ಪಾರ್ಕ್ ಸೇರಿದೆ. ಪೌರಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದರು. ಈ ಸಾರಿ ಚೆಂಡು ಹೂವು ಸಸಿಗೆ ಬದಲಾಗಿ ತುಳಸಿ, ಬೆಣ್ಣೆ ಹೂ ಗಿಡ ನೆಟ್ಟಿದ್ದಾರೆ. ಬೇರೆ ಬೇರೆ ತರಹದ ಹೂವಿನ ಗಿಡಗಳೂ ಇವೆ. ಮಕ್ಕಳಿಗೆ ಆಟವಾಡಲು ಮತ್ತು ಉಳಿದವರಿಗೆ ವ್ಯಾಯಾಮ ಸಲಕರಣೆಗಳು ಹೇಗಿವೆ ಎಂದರೆ ನಮ್ಮ ಕಣ್ಣನ್ನು ನಮಗೆ ನಂಬಲಾಗುವುದಿಲ್ಲ. ಪುಟ್ಟದೊಂದು ಗ್ರಂಥಾಲಯವಿದೆ. ನನಗೆ ವಾಕಿಂಗ್ ಮತ್ತು ಓದು ಎರಡೂ ಒಂದೇ ಕಡೆ ಆಗುತ್ತದೆ. ವಾಕಿಂಗ್ ಎಂದರೆ ಬೇಗ ಬೇಗ ನಡೆಯಬೇಕು ಎಂಬ ಬಹು ಜನರ ಸಲಹೆಯ ಮೇರೆಗೆ ನಡೆಯತೊಡಗಿದೆ.

ಇದ್ದಕ್ಕಿದ್ದಂತೆ ‘ನಗುವ ಗುಲಾಬಿ ಹೂವೇ’ ಎಂಬ ಹಾಡು ಕೇಳತೊಡಗಿತು. ಇದಾದ ಮೇಲೆ ‘ಓಂಕಾರದೀ’ ಎಂಬ ಹಾಡು ಶುರುವಾಯ್ತು. ಎಲ್ಲಿ ಹಾಡು ಹಾಕಿದ್ದಾರೆ ಎಂಬುದು ಗೊತ್ತಾಗಲಿಲ್ಲ. ಪಕ್ಕದಲ್ಲಿ ಫಂಕ್ಷನ್ ಇರಬಹುದಾ ಎಂದುಕೊಳ್ಳುತ್ತಾ ಪಕ್ಕದಲ್ಲಿ ಗುಡಿಸುತ್ತಿದ್ದವರನ್ನು ‘ಅಮ್ಮಾ, ಇಲ್ಲಿ ಹಾಡು ಕೇಳುತ್ತಿದೆಯಲ್ಲ’ ಎಂದೆ. ಅದಕ್ಕವರು, ‘ನಾನು ಹಾಡಾಕಿರದು’ ಅಂದರು. ‘ಹೌದಾ, ಏನು ರೇಡಿಯೊ ಹಾಕಿದ್ದೀರ?’ ಎಂದೆ. ‘ಹಾಂ, ರೇಡಿಯೊ ಇಟಗಂಡಿದಿನಿ’ ಎಂದರು. ಕೈಯಲ್ಲಿ ಕಾಣಲಿಲ್ಲ. ‘ಎಲ್ಲಿಟ್ಟಿದ್ದೀರಿ?’ ಎಂದೆ. ‘ಇಲ್ಲಿ ಸೊಂಟದಲ್ಲಿ’ ಅಂದರು. ‘ನೋಡಿ ಇಲ್ಲಿ’ ಎನ್ನುತ್ತಾ ಸೀರೆಯ ಸೆರಗನ್ನು ಸ್ವಲ್ಪ ಸರಿಸಿದರು. ಹೊಟ್ಟೆಯ ಎಡಭಾಗದಲ್ಲಿ ಬಿಳಿಯ ವಸ್ತ್ರದಲ್ಲಿ ಪುಟ್ಟ ರೇಡಿಯೊ ಸುತ್ತಿ ಸಿಕ್ಕಿಸಿಕೊಂಡಿದ್ದರು. ನನಗೆ ನನ್ನ ಕಣ್ಣನ್ನು ನಂಬಲಾಗಲಿಲ್ಲ. ಇಡೀ ಪಾರ್ಕಿನಲ್ಲಿ ಐದಾರು ಮಂದಿ ಹೆಂಗಸರ ಸೊಂಟದಲ್ಲಿ ರೇಡಿಯೊಗಳಿದ್ದವು. ಹಾಗಾಗಿ ಪಾರ್ಕ್‌ನ ಯಾವ ಕಡೆಗೆ ಹೋದರೂ ನನಗೆ ಒಂದೇ ಹಾಡು ಕೇಳುತ್ತಿತ್ತು.

ನಾನು ಎಷ್ಟೋ ವರ್ಷಗಳಿಂದ ನನ್ನ ಸ್ನೇಹಿತರಿಗೆ, ವೃತ್ತಿ ಬಾಂಧವರಿಗೆ, ವಿದ್ಯಾರ್ಥಿಗಳಿಗೆ, ನೆಂಟರಿಗೆ– ‘ರೇಡಿಯೊ ನಮ್ಮ ಸಂಸ್ಕೃತಿ. ಇದನ್ನು ಕೇಳುವುದರಿಂದ ಕಣ್ಣು ಕಿವಿಗೆ ತೊಂದರೆ ಇಲ್ಲ. ಬೆಳಗ್ಗೆ ಆರರಿಂದ ಎಂಟರ ತನಕ ಮಕ್ಕಳಿಗೆ ಬೇಸಿಕ್ ಜ್ಞಾನ ಸಿಗುತ್ತದೆ. ಪ್ರತಿಯೊಬ್ಬರೂ ಇದರ ಲಾಭ ಪಡೆದುಕೊಳ್ಳಬೇಕು. ನಿಮ್ಮ ಮನೆಯಲ್ಲಿ ಪುಟ್ಟದೊಂದು ರೇಡಿಯೊ ಇರಲಿ’ ಅಂತ ಹೇಳಿಕೊಂಡು ತಿರುಗಿದ್ದು ಹೊಳೆಯಲ್ಲಿ ಹುಣಸೇ ಹಣ್ಣು ತೊಳೆದಂತಾಗಿತ್ತು. ಆದರೆ, ಪಾರ್ಕ್‌ನಲ್ಲಿ ಈ ಪರಿಯ ರೇಡಿಯೊ ಕೇಳುಗರನ್ನು ಕಂಡು ಬೆರಗಾಯ್ತು ಮಾತ್ರವಲ್ಲ, ನನ್ನ ಕಣ್ಣನ್ನು ನಾನೇ ನಂಬಲಿಲ್ಲ.

ಸ್ವಲ್ಪ ಹೊತ್ತಿಗೆ ನಗರಸಭೆಯ ವತಿಯಿಂದ ಅಲ್ಲಿಯ ಕೆಲಸಗಾರರಿಗೆ ತಿಂಡಿ ಬಂತು. ಎಲ್ಲಾ ಪೌರಕಾರ್ಮಿಕರು ಪಾರ್ಕಿಗೆ ಬಂದು ಸೇರಿದರು. ಖುಷ್ಕ, ಮೊಟ್ಟೆ, ಬಾಳೆಹಣ್ಣು, ಕಾಫಿ, ಒಂದೊಂದು ಜಿಲೇಬಿ! ಇವರು ಊರಿಗೆ ಹೋಗಿದ್ದನ್ನು ನೆವ ಮಾಡಿಕೊಂಡು ಎರಡು ದಿನದಿಂದ ಮಜ್ಜಿಗೆ ಸಾರಿನಲ್ಲಿ ಕಾಲ ಕಳೆಯುತ್ತಿದ್ದ ನನಗೆ ಬಾಯಲ್ಲಿ ನೀರು. ನನ್ನ ಕಣ್ಣನ್ನು ನನಗೆ ನಂಬಲಾರದ ಸ್ಥಿತಿ. ಅವರು ಖುಷಿಯಾಗಿ ತಿಂಡಿ ತಿನ್ನುವುದನ್ನು ನೋಡಿ ನಂಗೆ ತುಂಬಾ ಖುಷಿಯಾಯಿತು. ಇದು ಸುಳ್ಳಲ್ಲ.

ಪ್ರತಿಕ್ರಿಯಿಸಿ: feedback@sudha.co.in